ರಸ್ತೆಗಳ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 19 : (90)

ಸದಸ್ಯರ ಹೆಸರು : ಶ್ರೀ ಶಿವಶಂಕರ ರೆಡ್ಡಿ ಎನ್. ಹೆಚ್. (ಗೌರಿಬಿದನೂರು)

ಉತ್ತರಿಸುವ ಸಚಿವರು : ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ 3 ವರ್ಷಗಳಿಂದ ಶೀರ್ಷಿಕೆ ನಂ.3054 ರಡಿಯಲ್ಲಿ ಗೌರಿಬಿದನೂರು ತಾಲ್ಲೂಕಿಗೆ ಬಿಡುಗಡೆ ಮಾಡಲ್ಪಟ್ಟ ಅನುದಾನ ವೆಷ್ಟು? (ಈ ಅನುದಾನದಲ್ಲಿ ಅಭಿವೃದ್ಧಿಪಡಿಸಿದ ವಿವರಗಳನ್ನು ಒದಗಿಸುವುದು)</td><td>ಕಳೆದ ಮೂರು ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 3054 (ಯೋಜನೆ) ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿಯಡಿ ಗೌರಿಬಿದನೂರು ತಾಲ್ಲೂಕಿಗೆ ಬಿಡುಗಡೆ ಮಾಡಲಾದ ಅನುದಾನ ಹಾಗೂ ಈ ಅನುದಾನದಲ್ಲಿ ಕಾರ್ಯಗತಗೊಳಿಸಲಾದ ನಿರ್ವಹಣೆ ದುರಸ್ತಿ ಅಭಿವೃದ್ಧಿ ವಿವರ ಕೆಳಕಂಡಂತಿದೆ.
<table>
<tr><th>ವರ್ಷ</th><th>ಅನುದಾನ (ರೂ. ಲಕ್ಷಗಳಲ್ಲಿ)</th><th>ಕಾರ್ಯಗತ ಗೊಳಿಸಲಾದ ವಾರ್ಷಿಕ ನಿರ್ವಹಣೆ ದುರಸ್ತಿ (ಕಿಮೀ)</th><th>ಪ್ರಸ್ತಾವಿತ ಅಭಿವೃದ್ಧಿ ಉದ್ದ (ಕಿಮೀಗಳಲ್ಲಿ)</th></tr>
<tr><td>2005-06</td><td>111.49</td><td>153.80</td><td>--</td></tr>
<tr><td>2006-07</td><td>115.00</td><td>--</td><td>10.50</td></tr>
<tr><td>2007-08</td><td>156.40</td><td>--</td><td>10.00</td></tr>
</table></td></tr>
<tr><td>ಆ.</td><td>ಪ್ರಸಕ್ತ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಹದಗೆಟ್ಟಿರುವ ರಸ್ತೆಗಳಾದ ತೊಂಡೇಬಾವಿ-ಮಂಚೇನಹಳ್ಳಿ ರಸ್ತೆ ನಾಮಗೊಂಡ್ಲು - ಮಂಚೇನಹಳ್ಳಿ ರಸ್ತೆ - ಅಲ್ಲಿಪೂರ - ಹೊಸೂರು ರಸ್ತೆ, ತರಿದಾಳುನಿಂದ ಕೊರಟಗೆರೆ ಗಡಿಯವರೆವಿಗೂ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿ ಪಡಿಸಲು ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ?</td><td>ಅ. ತೊಂಡೆಬಾವಿ-ಮಂಚೇನಹಳ್ಳಿ ರಸ್ತೆ ನಾಮಗೊಂಡ್ಲು - ಮಂಚೇನಹಳ್ಳಿ ರಸ್ತೆ ತೆರದಾಳುನಿಂದ ಕೊರಟಗೆರೆ - ಗಡಿಯವರೆಗಿನ ರಸ್ತೆಯು ಬಾಗೇಪಲ್ಲಿ ಹಲಗೂರು ರಾಜ್ಯ ಹೆದ್ದಾರಿ -94ರಲ್ಲಿ ಬರುತ್ತದೆ. (ಒಟ್ಟು ಉದ್ದ 57.00 ಕಿ.ಮೀ.) ಇದರಲ್ಲಿ 33.00 ಕಿ.ಮೀ. ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದು ಉಳಿದ 24.00 ಕಿ.ಮೀ. ರಸ್ತೆಯನ್ನು 2008-09ನೇ ಸಾಲಿನಲ್ಲಿ ಲೆ.ಶೀ.3054-12ನೇ ಹಣಕಾಸು ಆಯೋಗದಡಿ ಒದಗಿಸುವ ಅನುದಾನದಲ್ಲಿ ವಾರ್ಷಿಕ ನಿರ್ವಹಣೆ ದುರಸ್ತಿಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಸುಗಮಗೊಳಿಸಲಾಗುವುದು.</td></tr>
</table>

		ಆ. **ಅಲ್ಲಿಪುರ - ಹೊಸೂರು ರಸ್ತೆಯು,** ಯಲಹಂಕ - ಕುಡುಮಲಕುಂಟೆ (ರಾಜ್ಯ ಹೆದ್ದಾರಿ-9) ರಸ್ತೆಯ 83ನೇ ಕಿ.ಮೀ. ನಿಂದ ಪ್ರಾರಂಭಗೊಡು ಮಾರ್ಗ ವಿದುರಾಶ್ವತ್ತ, ಕೋಟಾಲದಿನ್ನೆ, ಆಲಿಪುರ ಸೇರುವ ರಸ್ತೆಯಾಗಿದ್ದು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಈ ರಸ್ತೆಯ ಒಟ್ಟು ಉದ್ದ 34.60ಕಿ.ಮೀ. ಇದ್ದು ಗೌರಿಬಿದನೂರು ತಾಲ್ಲೂಕಿನಲ್ಲಿಯೇ ಹಾದು ಹೋಗಿರುತ್ತದೆ. ಒಟ್ಟು 22.00ಕಿ.ಮೀ. ಉದ್ದದ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಉಳಿದ ಕಿ.ಮೀ. 12.60ಕಿಮೀಯನ್ನು 2008-09ನೇ ಸಾಲಿನಲ್ಲಿ ಲೆ.ಶೀ.3054-12ನೇ ಹಣಕಾಸು ಆಯೋಗದಡಿ ಒದಗಿಸುವ ಅನುದಾನದಲ್ಲಿ ವಾರ್ಷಿಕ ನಿರ್ವಹಣೆ : ದುರಸ್ತಿಯನ್ನು ಕೈಗೊಂಡು ವಾಹನಗಳ ಸಂಚಾರಕ್ಕೆ ಸುಗಮಗೊಳಿಸಲಾಗುವುದು. ಇ) **ತರದಾಳುವಿನಿಂದ ಕೊರಟಗೆರೆ** ಗಡಿಯವರೆಗೆ ಶಿಥಿಲಗೊಂಡಿರುವ ರಸ್ತೆಯಲ್ಲಿ 2008-09ನೇ ಸಾಲಿನ ವಾರ್ಷಿಕ ನಿರ್ವಹಣೆಯಲ್ಲಿ ರಸ್ತೆಗಳ ಗುಂಡಿಗಳನ್ನು ಮುಚ್ಚಿ ಹಾಗೂ ವಾರ್ಷಿಕ ನಿರ್ವಹಣೆ : ದುರಸ್ತಿಯನ್ನು ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗುವುದು.
೫.	ಹಾಗಿದ್ದಲ್ಲಿ, ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜನೆಯನ್ನು ಯಾವಾಗ ಜಾರಿಗೊಳಿಸಲಾಗುವುದು;	ಈ ರಸ್ತೆಗಳನ್ನು 12ನೇ ಹಣಕಾಸು ಆಯೋಗದಡಿ ಕ್ರಿಯಾ ಯೋಜನೆ ಅನುಮೋದನೆಗೊಂಡ ನಂತರ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ : ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಆದರೆ, ಈ ರಸ್ತೆಗಳು ಬಹಳ ಹದಗೆಟ್ಟಿವೆ. ಅವರು 3054 Head of Accountನಲ್ಲಿ ಏನು 2-3 ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ grant ಕೊಟ್ಟಿದ್ದಾರೆ ಅದು ಸಾಕಾಗುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ಸುಮಾರು 150ಕಿ.ಮೀ. PWD ರಸ್ತೆಗಳು ಬಂದಿವೆ. ಅದು ಏನೇನೂ ಸಾಲುತ್ತಿಲ್ಲ. ಆ ರಸ್ತೆಗಳ ಪರಿಸ್ಥಿತಿ ಏನಿದೆ ಎಂಬ ಬಗ್ಗೆ ನಾನು Photo ಸಹ ತೆಗೆಸಿದ್ದೇನೆ. ತೊಂಡೆಬಾವಿ-ಮಂಚೇನಹಳ್ಳಿ ರಸ್ತೆಯಲ್ಲಿ bridge ಬರುತ್ತದೆ. ಆ bridge ಕೂಡ ಬಹಳ ಹದಗೆಟ್ಟಿದೆ. ಅದು ಬೀಳುವಂಥ ಪರಿಸ್ಥಿತಿಯಲ್ಲಿದೆ. ದಯಮಾಡಿ, ಆ bridge ಅನ್ನು ಬೇಗ ದರುಸ್ತಿ ಮಾಡಿಸುವ ಕೆಲಸವಾಗಬೇಕು. ಮತ್ತೆ, ಅದೇ ರಸ್ತೆಯನ್ನು ಹಲಗೂರು ರಸ್ತೆ ಎಂದು ಹಿಂದೆ package ನಲ್ಲಿ ಇದ್ದ ಅದರ ಕಾಮಗಾರಿಯಾಗಿತ್ತು. ಅದಾಗಿ ಸುಮಾರು 3 ವಷಗಳ ಕಾಲವಾಗಿದೆ. ಅದು ಮತ್ತೆ ಗುಣಿ ಬಿದ್ದು ಹಾಳಾಗುತ್ತಿದೆ. ಅದರ deposit ಹಣ ಕೂಡ ಇದೆ. ಆ ಗುಣಿಯನ್ನು ಮುಚ್ಚುವ ಕೆಲಸದ ಬಗ್ಗೆ ನಾನು ಅನೇಕ ಸಂದರ್ಭದಲ್ಲಿ ಅಧಿಕಾರಿಗಳಿಗೆ ತಿಳಿಸಿದ್ದೆ. ಅದನ್ನು ಇನ್ನೂ ಕೂಡ ಮಾಡಿಲ್ಲ. ದಯಮಾಡಿ, ಆ ಗುಣಿ ಮುಚ್ಚುವ ಕೆಲಸ ಬೇಗ ಆಗಬೇಕು, ಮತ್ತು bridge ಅನ್ನು ರಿಪೇರಿ ಮಾಡಿಸುವ ಕೆಲಸ ಬೇಗ ಆಗಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ : ಇಲಾಖಾಧಿಕಾರಿಗಳ ಜೊತೆ ಚರ್ಚಿಸಿ, ಇದಕ್ಕೊಂದು ಪರಿಹಾರ ಕಂಡು ಹಿಡಿಯುತ್ತೇನೆ.